ಭಾವಿಸಲು ಸಾಧ್ಯವಾಗುವುದಿಲ್ಲ. ಯಾರಾದರೂ ಹಾಗೆ ಹೇಳಿದರೆ ಫಕೀರಿಚ್ಚ, 'ಇದರಲ್ಲಿ ತರ್ಕ ಎಂತದ್ದು? ಅದು ಹಾಗೇ ಅಲ್ವಾ?' ಅನ್ನುವ ಮುಖ ಭಾವದಲ್ಲಿ ಎದುರಿಗಿರುವವರ ಮುಖ ನೋಡಿ ಸುಮ್ಮನಾಗುತ್ತಾನೆ.

ಫಕೀರಿಚ್ಚನ ಕೊನೆಯ ಮಾತಿನಿಂದ ಸುರೇಶನಿಗೆ ಆಗಿದ್ದೂ ಅದೇ. ಹೊಳೆಯಿಂದ ಹೊಯ್ಗೆ ಕದ್ದು ಸಾಗಿಸುವ ವಿಲಿಯಂ ಮೇಸ್ತ್ರಿಯ ಲಾರಿ ಚಾಲಕನಾಗಿ ತಾನು ಹೋಗುತ್ತಿರುವುದನ್ನ ಫಕೀರಿಚ್ಚ ಒಂದೆರಡು ಬಾರಿ ವಿರೋಧಿಸಿದ್ದು ನೆನಪಾಗಿ ಬೇಡಬೇಡವೆಂದರೂ ಸುರೇಶನ ಮುಖ ಕಪ್ಪಿಟ್ಟಿತು. ನೆಬಿಸುಮ್ಮನ ಗಮನಕ್ಕೆ ಅದು ಬಂದಿದ್ದರಿಂದ ಆಕೆ ಕೂಡಲೆ "ಸುರೇಶ, ನೀನು ಬೇಗ ಹೋಗ್ಬೇಕು ಹೇಳಿದ್ದಲ್ವ." ಅಂದರು. ಸುರೇಶ ನೆಯ್ಯಪ್ಪದ ಲಕೋಟೆ ಹಿಡಿದು ದಡಬಡಾಯಿಸಿ ಹೊರಟ.

★★★

ಮನೆಯಂಗಳಕ್ಕೆ ಕಾಲಿಡುತ್ತಿದ್ದಂತೆ ಹೊರಗಡೆ ಜಗಲಿಯಲ್ಲಿ ಕುಳಿತು ಬೀಡಿ ಸುತ್ತುತ್ತಿದ್ದ ಹೆಂಡತಿಯನ್ನು ಕಂಡು, "ನೀವೆಲ್ಲ ತಯಾರಾಗಲಿಲ್ವಾ ಕುಸುಮಾ? ಎಲ್ಲಿ ರಾಜ? ಮೂಸಾ ಇನ್ನೂ ಬರ್ಲಿಲ್ವಾ?" ಕೇಳಿದ ಸುರೇಶ.

"ರಾಜ ಬರ್ಲಿಲ್ಲ ಪೊಪ್ಪ. ಇವತ್ತು ಸಿನಿಮಾಕ್ಕೆ ಹೋಗ್ಲಿಕ್ಕುಂಟು. ಸಂಜೆ ಆರೂವರೆಯೊಳಗೇ ರಾಜನ್ನ ತಂದಿಡ್ಬೇಕಂತ ಅಮ್ಮ ಮೂಸಾಕುಞಿಗೆ ಬೆಳಿಗ್ಗೆಯೇ ಹೇಳಿದ್ರು. ಈಗ ಆರೂಮುಕ್ಕಾಲಾಯ್ತು. ನೀವೂ ಲೇಟು. ಇವತ್ತು ಫಿಲ್ಮಿಗೋಗದಿದ್ರೆ ನಂಗೆ ಊಟವೂ ಬೇಡ. ಎಂತದೂ ಬೇಡ. ಶಾಲೆಯಲ್ಲಿ ಫ್ರೆಂಡ್ಸ್ ಹತ್ತಿರ ಇವತ್ತು ಸಿನಿಮಾಕ್ಕೆ ಹೋಗ್ಲಿಕ್ಕುಂಟಂತ ಹೇಳಿದ್ದೇನೆ." ಸುರೇಶನ ಪ್ರಶ್ನೆಗೆ ಉತ್ತರಿಸಿದವಳು ಹತ್ತನೆ ತರಗತಿ ಓದುತ್ತಿರುವ ಮಗಳು ರಕ್ಷಾ. ಅವಳ ತಮ್ಮ ರಾಜೇಶನೂ ಧ್ವನಿ ಸೇರಿಸಿದ್ದ. ಮಕ್ಕಳ ಮುಖ ಸಣ್ಣಗಾಗಿದ್ದು ನೋಡಿ "ನಿಮ್ಗೆ ಸಿನಿಮಾ ತಪ್ಪದಿದ್ದರಾಯ್ತಲ್ಲ" ಅಂದ. ಅಷ್ಟರಲ್ಲಿ ಸಣ್ಣವಳು ದೀಕ್ಷಾ ಒಳಗಿನಿಂದ ಓಡಿ ಬಂದು ಅವನ ಕೈ ಜಗ್ಗಿದಳು. ತಟ್ಟನೆ ಅವಳ ಕೈಗೆ ಉಮ್ಮ ಕೊಟ್ಟ ನೈಯಪ್ಪದ ಲಕೋಟೆ ಇಟ್ಟ. ದೀಕ್ಷಾ ಮೂಗರಳಿಸಿ "ಇದು ನೈಯಪ್ಪಂ" ಅನ್ನುತ್ತ ಅಮ್ಮನತ್ತ ಓಡಿದಳು. "ನೋಡುವಾ. ನಾನು ಬೇಗ ರೆಡಿಯಾಗ್ತೇನೆ. ಅಷ್ಟೊತ್ತಿಗೆ ಮೂಸಾ ಬಂದಾನು" ಅನ್ನುತ್ತ ಬಚ್ಚಲಿನತ್ತ ಹೋದರೂ ಮೂಸಾನ ಮೇಲೆ ಅಸಹನೆ ಹುಟ್ಟಿಕೊಂಡಿತು ಅವನಿಗೆ. 'ಇವತ್ತು ಫ್ಯಾಮಿಲಿಯೊಟ್ಟಿಗೆ ಸಿನಿಮಾಕ್ಕೆ ಹೋಗ್ಲಿಕ್ಕಿದೆ. ಐದು ಗಂಟೆಯ ನಂತರದ ಬಾಡಿಗೆ ಒಪ್ಪಿಕೊಳ್ಬೇಡ' ಎಂದು ಬೆಳಗ್ಗೆ ಹೇಳಿದ್ದಲ್ಲದೆ, ಮಧ್ಯಾಹ್ನ ಮೊಬೈಲಿಗೆ ಎರಡೆರಡು ಬಾರಿ ಫೋನ್ ಮಾಡಿದ್ದೇನೆ. ಆದ್ರೂ ಹೀಗೆ ಮಾಡುವುದಂದ್ರೆ ಹಾಂಕಾರ ಜಾಸ್ತಿಯಾದದ್ದಲ್ವಾ ಇವನಿಗೆ ಅನಿಸಿ ಪಿತ್ತ ನೆತ್ತಿಗೇರಲಾರಂಭಿಸಿತು. ಈ ಮೂಸಾಕುಞಿ ಬದಲಾಗುತ್ತಿದ್ದಾನೆ. ಈಗೀಗ ಹೆಚ್ಚಿನ ದಿನಗಳಲ್ಲೂ ರಾಜನನ್ನು ಅವನ ಮನೆಯಲ್ಲೇ ಇಟ್ಟುಕೊಳ್ಳುತ್ತಾನೆ. ಯಾವಾಗ ನೋಡಿದ್ರೂ ರಾತ್ರಿ ಫೋನ್ ಮಾಡಿ, "ಈಗ ರಾತ್ರಿ ಹತ್ತುವರೆಯಾಯ್ತಲ್ಲ ಸುರೇಶಣ್ಣ. ಇವತ್ತು 'ರಾಜ' ನಮ್ಮ ಮನೆಯಲ್ಲೇ ಇರ್ಲಿ. ಈಗಷ್ಟೆ ಚಂದ್ರಗಿರಿಯಿಂದ ಬಂದದ್ದೆಂದೋ; ಮೊಗ್ರಾಲ್ ಪುತ್ತೂರಿನಾಚೆ ಹೋಗಿ ಬಂದದ್ದೆಂದೋ; ಬೆಳಗ್ಗೆ ಆರು ಗಂಟೆಗೇ ಒಂದು ಪಾರ್ಟಿಯನ್ನು ರೈಲ್ವೆಸ್ಟೇಷನ್ನಿಗೆ ಬಿಡಲಿಕ್ಕಿದೆಯೆಂದೊ ನೆಪ ಹೇಳುವುದೇ ಜಾಸ್ತಿಯಾಗಿದೆ. ಇದ್ಯಾವ ಕಾರಣಗಳಲ್ಲದಿದ್ದರೆ ಗುಟ್ಟು ನೆನಪಿಸುವವನಂತೆ, ನಾಳೆ ಬೆಳಗ್ಗೆ ಐದುವರೆಗೆ ಹೊಯ್ಗೆ ಎಳೀಲಿಕ್ಕುಂಟಲ್ಲ ಸುರೇಶಣ್ಣ. ನಾವು ಹೋಗ್ಲಿಕ್ಕೆ ಸ್ವಲ್ಪ ತಡವಾದ್ರೂ ವಿಲಿಯಂ ಮೇಸ್ತ್ರಿಗೆ ಕೋಪ ಬರ್ತದಲ್ವ. ನಾನೀಗ ಬಂದ್ರೆ ನಿಮಗೂ ನಿದ್ದೆ ಹಾಳು. ಬೆಳಿಗ್ಗೆ